ಉಪಾಧ್ಯಕ್ಷರು : ಬೇರೆ ಮಾಹಿತಿ ಬೇಕಾದರೆ ಒದಗಿಸಿಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ತಮ್ಮ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಗೀರ್‌ರವರೇ, ತಾವು ಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದವರು, ತಾವು ಈ ರೀತಿ ಮಾತನಾಡಿದರೆ ಹೇಗೆ? ದಯವಿಟ್ಟು ಕುಳಿತುಕೊಳ್ಳಿ.

ಹಾವು ಮತ್ತು ನಾಯಿ ಕಡಿತಕ್ಕೆ ಔಷಧ ಹಾಗೂ ಮಂಗನ ಕಾಯಿಲೆಯನ್ನು ನಿಯಂತ್ರಿಸುವ ಬಗ್ಗೆ

147 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾವು ಮತ್ತು ಹುಚ್ಚುನಾಯಿ ಕಡಿತಕ್ಕೆ ಔಷಧಿಗಳನ್ನು ಸರ್ಕಾರದವರು ಒದಗಿಸುತ್ತಿದ್ದಾರೆಯೇ?*

ಆ) *ಮಂಗನ ಕಾಯಿಲೆ ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಇ) *ಕರುಳ ಬೇನೆ ಪ್ರತಿ ವರ್ಷ ಕಾಣಿಸಿಕೊಳ್ಳುತ್ತಿದ್ದು ಇದನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು

ಆ) ಈ ಕಾಯಿಲೆಯು ಸಾಮಾನ್ಯವಾಗಿ ಮಲೆನಾಡು ಪ್ರದೇಶಗಳಾದ ಚಿಕ್ಕಮಗಳೂರು ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಂಡು ಬರುತ್ತಿದ್ದು, ಅದರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸಮೀಕ್ಷೆ
3. ರಕ್ತ ಮಾದರಿ ಸಂಗ್ರಹಣೆ ಮತ್ತು ಪರೀಕ್ಷೆ
3. ರೋಗ ನಿರೋಧಕ ಚುಚ್ಚುಮದ್ದು (ಲಸಿಕೆ)ಗಳನ್ನು ಕೊಡಲಾಗುತ್ತಿದೆ. ಉಚಿತವಾಗಿ ಸಾಕಷ್ಟು ಪ್ರಮಾಣದಲ್ಲಿ ರೋಗ ತಗುಲಿದ ವ್ಯಕ್ತಿಗಳಿಗೆ ಲಸಿಕೆ ಕೊಡಲಾಗುವುದು.
4. ಸಾರ್ವಜನಿಕರಿಗೆ ಈ ರೋಗದ ಬಗ್ಗೆ ಮತ್ತು ರೋಗದ ಸೋಂಕಿನಿಂದ ದೂರವಿರಲು ಮತ್ತು, ಸೋಂಕು ತಗುಲದಂತೆ ಇರಲು ಪಾಲಿಸಬೇಕಾದ ಕೆಲವು ಸುಲಭೋಪಾಯಗಳ ಬಗ್ಗೆ ಮಾಹಿತಿಯನ್ನು ಈ ಕೆಳಕಂಡ ಮಾಧ್ಯಮಗಳ ಮೂಲಕ ಪ್ರಚಾರ ಮಾಡಿ ತಿಳುವಳಿಕೆ ನೀಡಲಾಗುತ್ತಿದೆ.

ಅ) ರೇಡಿಯೋ, ಟಿ.ವಿ. ಕಾರ್ಯಕ್ರಮ

ಆ) ಬಿತ್ತಿ ಪತ್ರಗಳು, ಕರಪತ್ರಗಳು

ಇ) ಆರೋಗ್ಯ ಕಾರ್ಯಕರ್ತರ ಮೂಲಕ ವಿಷಯವನ್ನು ವಿವರಿಸಿ ಹೇಳಲಾಗುತ್ತಿದೆ.

ಈ) ಸ್ಥಳೀಯ ಸಂಸ್ಥೆಗಳ ಆಶ್ರಯದಲ್ಲಿ ಸಭೆಗಳನ್ನು ನಡೆಸಿ ತಿಳುವಳಿಕೆ ನೀಡಲಾಗುತ್ತಿದೆ.

ಇ) 1. ಸಮಸ್ಯೆಗೊಳಗಾದ ಪ್ರದೇಶದಿಂದ ನೀರಿನ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿ ಅಶುದ್ಧವೆಂದು ಕಂಡುಬಂದ ಕಡೆ ಸಂಬಂಧಪಟ್ಟವರಿಗೆ ನೀರನ್ನು ಶುದ್ಧ ಪಡಿಸಿ ಸರಬರಾಜು ಮಾಡಲು ಸೂಚನೆ ನೀಡಲಾಗುತ್ತಿದೆ.

2. ಸಾರ್ವಜನಿಕರಿಗೂ ಸಹ ನೀರನ್ನು ಶುದ್ಧ ಪಡಿಸಿ ಉಪಯೋಗಿಸುವ ಸುಲಭ ಉಪಾಯಗಳನ್ನು ವಿವಿಧ ಮಾಧ್ಯಮಗಳ ಮೂಲಕ ತಿಳಿಸಿಕೊಡಲಾಗುತ್ತಿದೆ.

3. ಸಾರ್ವಜನಿಕರಿಗೆ ಪರಿಸರ ನೈರ್ಮಲ್ಯ ಕಾಪಾಡುವ ಅವಶ್ಯಕತೆಯನ್ನು ಮತ್ತು ಮಾರ್ಗವನ್ನು ತಿಳಿಸಿಕೊಡಲಾಗುತ್ತಿದೆ.

4. ಕಾಯಿಲೆ ಹರಡಿದ ಸ್ಥಳಗಳಲ್ಲಿ ಕೀಟನಾಶಕಗಳನ್ನು ಉಪಯೋಗಿಸಿ ಕಾಯಿಲೆ ಹರಡದಂತೆ ಕ್ರಮಕೈಗೊಳ್ಳಲಾಗುತ್ತಿದೆ.

5. ರೋಗ ತಗುಲಿದ ವ್ಯಕ್ತಿಗಳಿಗೆ ಅವಶ್ಯಕವಾದ ಔಷದೋಪಚಾರಗಳನ್ನು ನೀಡಲಾಗುತ್ತಿದೆ.

6. ಸಂತೆ, ಜಾತ್ರೆ ಇತ್ಯಾದಿ ಸನ್ನಿವೇಶಗಳಲ್ಲಿ ಹೆಚ್ಚಿನ ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

7. ನಗರದ ಮತ್ತು ಎಲ್ಲಾ ಗ್ರಾಮೀಣ ಆಸ್ಪತ್ರೆಗಳಲ್ಲಿ ಕರಳುಬೇನೆ:ಚಿಕಿತ್ಸೆ ನೀಡಲು ಅವಶ್ಯಕವಾದ ಔಷಧಗಳ ದಾಸ್ತಾನನ್ನು ಸಾಕಷ್ಟು ಪ್ರಮಾಣದಲ್ಲಿ ಇಡಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಹಾವು ಮತ್ತು ಹುಚ್ಚುನಾಯಿ ಕಡಿತಕ್ಕೆ ಔಷಧಿಗಳನ್ನು ಎಲ್ಲಾ ಆಸ್ಪತ್ರೆಗಳಲ್ಲೂ ಒದಗಿಸಿದ್ದೇವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಇದರ ಬಗ್ಗೆ ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕು. ಆಸ್ಪತ್ರೆಗಳಲ್ಲಿ ಔಷಧಿಗಳ ತೀವ್ರ ಕೊರತೆ ಇದೆ. ನಾಗರ ಹಾವು ಕಡಿದರೆ, ಅದಕ್ಕೆ ಬೇಕಾದ ಔಷಧಿ ಇಡೀ ರಾಜ್ಯದಲ್ಲಿ ಅನೇಕ ಕಡೆ ಇವತ್ತು ತಕ್ಷಣ ಸಿಗುತ್ತಿಲ್ಲ. ನಾಗರ ಹಾವು ಕಡಿದರೆ ಅದರ ವಿಷ ಎಷ್ಟು ಬೇಗ ಕಡಿಯುತ್ತದೆ ಎಂದರೆ, ಹಾವು ಕಡಿದ ಒಂದ ನಿಮಿಷದಲ್ಲೇ ಮನುಷ್ಯ ಸತ್ತು ಹೋಗುತ್ತಾನೆ. ಅದಕ್ಕೆ ತಕ್ಷಣ ಔಷಧಿ ದೊರೆಯುವ ವ್ಯವಸ್ಥೆ ಮಾಡಬೇಕು. ಎಲ್ಲೋ ಒಂದು ಕಡೆ ಔಷಧಿ ಸಿಗತಕ್ಕ ವ್ಯವಸ್ಥೆ ಮಾಡದೇ ಎಲ್ಲೆಡೆ ತಕ್ಷಣ ದೊರೆಯುವ ವ್ಯವಸ್ಥೆ ಮಾಡಬೇಕು. ಕೊಳಕು ಮಂಡಲ ಹಾವು ಎಂಬುದೊಂದು ಇದೆ, ಇದು ಬಹಳ ವಿಷ ಪೂರಿತವಾದುದು. ಕೇವಲ ಅದನ್ನು ತುಳಿದರೆ ಸಾಕು, ಅದರಿಂದ ಖಾಯಿಲೆ ಬರುತ್ತದೆ. ಎಲ್ಲಾ ಆಸ್ಪತ್ರೆಗಳಲ್ಲೂ ಔಷಧಿ ಇದೆಯೇ ಎಂದು ತಾವು ಪ್ರಾಮಾಣಿಕವಾಗಿ ನೋಡಬೇಕು, ಸುಮ್ಮನೆ ಹೌದು ಎಂದು ಹೇಳುವುದಲ್ಲ. ನಾನು ನೋಡಿರುವ ಪ್ರಕಾರ ಅನೇಕ ಆಸ್ಪತ್ರೆಗಳಲ್ಲಿ ಈ ಔಷಧಿ ಇಲ್ಲ. ಅದನ್ನು ಒದಗಿಸುವುದಕ್ಕೆ ತಾವು ಎಷ್ಟರಮಟ್ಟಿಗೆ ಪ್ರಯತ್ನ ಮಾಡುತ್ತೀರಿ ಎಂಬುದನ್ನು ಈಗ ತಿಳಿಸಬೇಕು.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೇ, ನಾಯಿ ಕಡಿತಕ್ಕೆ ನಮ್ಮ ರಾಜ್ಯದ ಬೆಳಗಾಂನಲ್ಲಿರತಕ್ಕ ವ್ಯಾಕ್ಸಿನ್ ಯೂನಿಟ್‌ನಲ್ಲಿ ಔಷಧಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ. ಅದರ ಲೈಫ್ ಸ್ಪಾನ್ ಕೇವಲ ಆರು ತಿಂಗಳು ಮಾತ್ರ. ಹೀಗಾಗಿ ಅದನ್ನು ಹೆಚ್ಚು ಸಮಯ ಈ ಔಷಧಿಯನ್ನು

ಇಟ್ಟುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಹಾವು ಕಡಿತದಂತಹ ಸಂದರ್ಭಗಳಲ್ಲಿ ಆಯಾ ಜಿಲ್ಲೆಯ ಜಿಲ್ಲಾ ಸರ್ಜನ್ ಮತ್ತು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್, ಹಾಗೂ ತಾಲ್ಲೂಕು ಹೆಲ್ತ್ ಆಫೀಸರ್‌ಗಳೇ, ನಾವು ಅವರಿಗೆ ಕೊಡತಕ್ಕ ಶೇಕಡ 60ರಷ್ಟು ಹಣದಲ್ಲಿ ಕನಿಷ್ಟ ಒಂದು ಆಸ್ಪತ್ರೆಯಲ್ಲಿ ಹಾವು ಕಡಿದಂತಹ ಇಬ್ಬರಿಗಾದರೂ ಔಷಧಿ ಒದಗಿಸುವುದಕ್ಕೆ, ಈ ರೀತಿ ಕಡಿಯುವ ಪ್ರಮಾಣವನ್ನು ನಾವು ರಫ್ ಆಗಿ ಇಟ್ಟುಕೊಂಡು ಹಣವನ್ನು ಒದಗಿಸಿದ್ದೇವೆ. ಅದು ಪೌಡರ್ ರೂಪದಲ್ಲಿ ಇರುತ್ತದೆ. ನಾಯಿ ಕಡಿತಕ್ಕೆ ಬೆಳಗಾಂನಲ್ಲಿ ಉತ್ಪಾದಿಸುತ್ತಿರುವ ಔಷಧಿಯ ಪ್ರಮಾಣವನ್ನು 22 ಲಕ್ಷ ಡೋಸಸ್‌ಗಳಿಂದ, ಇನ್ನೂ 10 ಲಕ್ಷ ಡೋಸಸ್‌ಗಳಿಂದ ಹೆಚ್ಚಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಕರ್ನಾಟಕ ಹೆಲ್ತ್ ಸಿಸ್ಟಮ್ ಡೆವಲಪ್‌ಮೆಂಟ್ ಅಡಿಯಲ್ಲಿ ಇದನ್ನು ನಾವು ಕೈಗೊಂಡಿದ್ದೇವೆ. ಜಿಲ್ಲಾ ಸರ್ಜನ್, ಡಿ.ಹೆಚ್.ಓ. ಟಿ.ಹೆಚ್.ಓ.ಗಳು ಅವರಿಗೆ ಕೊಟ್ಟಿರುವ ಹಣದಲ್ಲಿ ಔಷಧಿಯನ್ನು ನೇರವಾಗಿ ಕೊಂಡುಕೊಳ್ಳಲಿಕ್ಕೆ ಈಗಾಗಲೇ ಸರ್ಕಾರ ಸೂಚನೆ ನೀಡಿದೆ. ಹಾವು ಕಡಿತದ ಪ್ರಕರಣಗಳು ಬಂದಾಗ ಯಾವುದೋ ಒಂದು ರಿಮೋಟ್ ಪ್ಲೇಸ್‌ನಲ್ಲಿರತಕ್ಕ ಆಸ್ಪತ್ರೆಯಲ್ಲಿ ಔಷಧಿ ತಕ್ಷಣ ಸಿಗದೇ ಇರಬಹುದು. ಆ ರೀತಿ ಅನಾನುಕೂಲವಾಗದೇ ಇರಲೆಂದು, ಅವರಿಗೆ ಕೊಡತಕ್ಕ ಶೇಕಡ 60ರಷ್ಟು ಹಣದಲ್ಲಿ ನೇರವಾಗಿ ಅವರೇ ಹಾವು ಕಡಿತಕ್ಕೆ ಔಷಧಿಯನ್ನು ಕೊಂಡುಕೊಳ್ಳಲು ಸರ್ಕಾರ ಈಗಾಗಲೇ ಸೂಚನೆ ನೀಡಿದೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಇವರು ವ್ಯವಸ್ಥೆ ಮಾಡಿದ್ದೇವೆಂದು ಹೇಳುತ್ತಾರೆ, ನನಗೆ ಪ್ರಾಮಾಣಿಕವಾಗಿ ನಂಬಿಕೆ ಇಲ್ಲ. ಅನೇಕ ಆಸ್ಪತ್ರೆಗಳಲ್ಲಿ ನಾನು ನೋಡಿದ್ದೇನೆ, ಹಾವು ಕಡಿದ ತಕ್ಷಣ ಅದರಲ್ಲೂ ಮಲೆನಾಡು ಪ್ರದೇಶಗಳಲ್ಲಿ ಇದು ಬಹಳ ತೀವ್ರವಾಗಿದೆ. ನಿಜವಾಗಿ ಸತ್ಯಕ್ಕೆ ದೂರವಾದ ಉತ್ತರವನ್ನು ಮಾನ್ಯ ಸಚಿವರು ಕೊಡುತ್ತಿದ್ದಾರೆ. ಪ್ರಾಮಾಣಿಕವಾಗಿ ತಾವು ಹೇಳಿ ಇದು ಬಹಳ ಅತ್ಯಂತ ಅಪಾಯಕಾರಿಯಾಗಿದೆ. ಹಾವು ಕಡಿದ ಮೇಲೆ ಒಂದು ನಿಮಿಷ ಉಳಿಯುವ ಪ್ರಶ್ನೆ ಇಲ್ಲ. ಹಳ್ಳಿಗಳಲ್ಲಿ ಹೋಗುತ್ತಾರೆ, ಬೇವಿನ ಸೊಪ್ಪು ಹೊಡೆದು ಮಂತ್ರ ಹಾಕುವುದು ಮಾಡುತ್ತಾರೆ. ಈ ಒಂದು ಅನಾಗರೀಕವಾದ ವರ್ತನೆ ನಡೆಯುತ್ತಿದೆ. ನಾವು ಪರಿಣಾಮಕಾರಿಯಾಗಿ ಪ್ರತಿಯೊಂದು ಹೋಬಳಿ ವ್ಯವಸ್ಥೆಯಲ್ಲಿ ಇದನ್ನು ಇಡುವುದಕ್ಕೆ, ಯಾರಾದರೂ ಒಬ್ಬರು ಜವಾಬ್ದಾರರನ್ನು ಇಟ್ಟುಕೊಳ್ಳುವುದಕ್ಕೆ ಪ್ರತಿ ಹಳ್ಳಿಗಳಲ್ಲಿ, ಹೋಬಳಿಗಳಲ್ಲಿ ಯಾರಾದರೂ ಮುಖಂಡರ ಮನೆಯಲ್ಲಿ ನಾವು ಇಡುತ್ತೇವೆ, ಯಾರು ಬೇಕಾದರೂ ಬಂದು ಔಷಧಿಯನ್ನು ತಕ್ಷಣ ತೆಗೆದುಕೊಂಡು ಹೋಗಬಹುದು, ಸಾರ್ವಜನಿಕವಾಗಿ ಇದನ್ನು ಯಾರು ಬೇಕಾದರೂ ಧಾರಾಳವಾಗಿ ಕೊಡಬಹುದು, ಎಲ್ಲಾ ಹಳ್ಳಿಗಳಲ್ಲಿ ಸಿಗುತ್ತದೆ ಎಂಬ ಧೈರ್ಯ ಬರತಕ್ಕಂತಹ ವ್ಯವಸ್ಥೆ ತಾವು ಮಾಡುತ್ತೀರಾ? ಈಗಾಗಲೇ ಕರಳು ಬೇನೆ ಪ್ರಾರಂಭವಾಗಿದೆ, ಕರ್ನಾಟಕದ ಕೆಲವು ಮೂಲೆಗಳಲ್ಲಿ ನಾಲ್ಕೈದು ಜನ ಸತ್ತಿರುವ ವರದಿ ಬಂದಿದೆ. ಅದರ ಬಗ್ಗೆ ತಾವು ಏನು ಎಚ್ಚರ ವಹಿಸಿದ್ದೀರಿ, ಅದು ಒಂದು. ಮತ್ತು ಹಾವು ಕಚ್ಚಿದರೆ ಅದಕ್ಕೆ ಪ್ರತಿ ಹಳ್ಳಿ ಹೋಬಳಿಯಲ್ಲಿ ಔಷಧಿ ಸಿಗತಕ್ಕಂತಹ ವ್ಯವಸ್ಥೆ ಮಾಡಿ. ದೊಡ್ಡ ಆಸ್ಪತ್ರೆಬೇಕಾಗಿಲ್ಲ, ಡಾಕ್ಟರ್ ಬೇಕಾಗಿಲ್ಲ, ಹಳ್ಳಿಯ ಮುಖಂಡರು, ಗೌಡರು ಶಾಸಕರು, ನಿಮ್ಮ ಕಾರ್ಯದರ್ಶಿ ಯಾರು ಇರುತ್ತಾರೆ ಅವರಿಗೆ ಕೊಟ್ಟು ಆ ಜನಗಳಿಗೆ ಹಂಚತಕ್ಕಂತಹ, ತಕ್ಷಣಕ್ಕೆ ಜನಗಳಿಗೆ ಅನುಕೂಲವಾಗುವಂತಹ ವ್ಯವಸ್ಥೆ ತಾವು ಮಾಡುತ್ತೀರಾ?

ಡಾ|| ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಉಪಾಸಭಾಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ಅರ್ಥವಾಗಿದೆ, ಆಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಆಯಾ ತಾಲ್ಲೂಕಿನ ಆರೋಗ್ಯ ಅಧಿಕಾರಿಗೆ ನೇರವಾಗಿ ಹಾವು ಕಡಿತದ ಔಷಧಿ ಪಡೆಯಲಿಕ್ಕೆ ಅಧಿಕಾರ ಕೊಟ್ಟು ಹಣವನ್ನು ಒದಗಿಸಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಸಭಾಧ್ಯಕ್ಷರೆ, ನೀರಾವರಿ ಪ್ರದೇಶ ಜಾಸ್ತಿಯಾಗಿ ಕ್ರಿಮಿ ನಾಶಕಗಳನ್ನು ರೈತರು ಧಾರಾಳವಾಗಿ ಉಪಯೋಗಿಸುತ್ತಾ ಬಂದಂತೆ ಹಾವುಗಳ ಸಂಖ್ಯೆಯೂ ಕಡಿಮೆಯಾಗಿದೆ. ಹಾವು ಕಡಿದು ಜನ ಸಾಯುವುದು ಕಡಿಮೆಯಾಗಿದೆ. ಹಾಗಂತ ಕೊಡುವುದಿಲ್ಲವೆಂದು ನಾನು ಹೇಳುವುದಿಲ್ಲ. ಅದೇ ರೀತಿ ಹುಚ್ಚು ನಾಯಿ. ಹುಚ್ಚು ನಾಯಿಗಳು ಹುಚ್ಚು ನಾಯಿಗಳಿಂದ ಹುಚ್ಚರಾಗುವುದು ಕಡಿಮೆ. ಹುಚ್ಚು ನಾಯಿ ಕಡಿದಾಗಲಾಗಲಿ, ಹಾವು ಕಡಿದಾಗಲಾಗಲಿ ಔಷಧಿ ಕೊಡದೆ ಎಲ್ಲಾದರೂ ಸತ್ತರೆ ಆ ಪ್ರದೇಶವನ್ನು ವಾಟಾಳ್ ನಾಗರಾಜ್‌ರವರು ಮಾಹಿತಿ ಕೊಟ್ಟರೆ ಆ ಪ್ರದೇಶದಲ್ಲಿ ಕೊಡುವ ವ್ಯವಸ್ಥೆ ಮಾಡುತ್ತೇವೆ. ಜನರಲ್ಲಾಗಿ ನನ್ನ ಅಬ್ಸರ್ವೇಷನ್ ಪ್ರಕಾರ ನೀರಾವರಿ ಪ್ರದೇಶದಲ್ಲಿ ಈಗ ಹಾವುಗಳು ಹುಡುಕಿದರೂ ಸಿಗುತ್ತಿಲ್ಲ. ಆದಷ್ಟೂ ಪೆಸ್ಟಿಸೈಡ್ಸ್‌ದಿಂದ ಹೋಗುತ್ತಿವೆ. Pesticides may not be able to kill the pests but they are able to kill the snakes...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತು ಹೇಳಿದರು, ಹಾವು ಹುಚ್ಚು ಬರುವುದು ಬೇರೆ, ನಾಯಿ ಕಡಿದು ಹುಚ್ಚು ಬರುವುದು ಬೇರೆ. ಅದು ಎರಡೂ ಕಡಿಯದೇ ಹೆಚ್ಚು ಬರುವಂತಹ ಜನ ಎಂದು ಹೇಳಿದರು. ಅದರ ವಿವರಣೆ ಕೊಡಿ.

ಶ್ರೀ ಜೆ.ಹೆಚ್. ಪಟೇಲ್ : ನಾನು ಹಾಗೇ ಹೇಳಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾಯಿಗಳಿಗೆ ಹುಚ್ಚು ಹಿಡಿಯುವುದು ಕಡಿಮೆಯಾಗುತ್ತಿದೆ ಎಂದರೆ ಬೇರೆ ಎಲ್ಲೋ ಹುಚ್ಚು ಹಿಡಿಯುತ್ತಿದೆ ಎಂದು ಅವರು ಹೇಳುವುದು.

ಶ್ರೀ ವಾಟಾಳ್‌ನಾಗರಾಜ್ : ಎಲ್ಲಿ ಯಾವ ವರ್ಗದಲ್ಲಿ ದನಗಳ ಮೇಲೋ, ಹಸುಗಳ ಮೇಲೋ, ಕರುಗಳ ಮೇಲೆ ಅಥವಾ ಜನಗಳ ಮೇಲೆ ಯಾವುದು ಎಂದು ತಾವು ಸ್ವಲ್ಪ ವಿವರಣೆ ಕೊಟ್ಟರೆ....

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಂಗನ ಕಾಯಿಲೆ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಉಚಿತವಾಗಿ ಲಸಿಕೆ ಕೊಡಬೇಕೆಂದು ಹೇಳಿದರು. ಮಲೆನಾಡಿನಲ್ಲಿ ಮಂಗನ ಕಾಯಿಲೆ ಬಂದು ನೂರಾರು ಜನ ಸತ್ತು ಹೋಗಿದ್ದಾರೆ. ಶಿವಮೊಗ್ಗದ ಲಸಿಕೆ ತಯಾರು ಮಾಡುವ ಕೇಂದ್ರ ಮುಚ್ಚಿ ಆರು ತಿಂಗಳಾಗಿದೆ. ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲ ಗೊತ್ತಿಲ್ಲ. ಅಲ್ಲಿ ಲ್ಯಾಬ್‌ಗೆ ಇರತಕ್ಕಂತಹ ಕಟ್ಟಡ ಸೋರಿ ಅಲ್ಲಿ ಲಸಿಕೆ ತಯಾರು ಮಾಡಿದರೆ ಅನಾಹುತವಾಗುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಆರು ತಿಂಗಳುಗಳಿಂದ ಮುಚ್ಚಿದ್ದಾರೆ. ಲಸಿಕೆಗಳು ಇಲ್ಲ. ಮಂಗನ ಕಾಯಿಲೆ ಬಂದು ನೂರಾರು ಜನ ಆಹುತಿಯಾಗುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇದರ ಪರಿಣಾಮ ಬೀರುತ್ತಿದೆ.

ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ, ತಕ್ಷಣ ಲ್ಯಾಬ್‌ಓಪನ್ ಮಾಡುತ್ತಾರಾ? ಲಸಿಕೆ ತಯಾರು ಮಾಡುತ್ತಾರಾ? ಅದನ್ನು ದಯವಿಟ್ಟು ಹೇಳಿ.

ಡಾ||ಹೆಚ್. ಸಿ. ಮಹದೇವಪ್ಪ : ಕಳೆದ ವಿಧಾನ ಸಭೆಯಲ್ಲಿ ಈ ಪ್ರಶ್ನೆ ಬಂದಿತ್ತು. ಅದಕ್ಕೆ ಉತ್ತರ ಕೊಟ್ಟಿದ್ದೇನೆ. 1997-98ನೇ ಸಾಲಿನಲ್ಲಿ ಕ್ಯಾಸನೂರ್ ಫಾರೆಸ್ಟ್ ಡಿಸೀಸ್ ಎಂದು ಶಿವಮೊಗ್ಗ ಏರಿಯಾದಲ್ಲಿ ಇದೆ, ಅದು ವೈರಸ್‌ನಿಂದ ಬರತಕ್ಕಂತಹ ಕಾಯಿಲೆ. ಮಂಗನಿಂದ ಬರತಕ್ಕಂಥ ಕಾಯಿಲೆ. ಕಳೆದ ವರ್ಷದ ವಿಶ್ವ ಆರೋಗ್ಯ ಸಂಸ್ಥೆ ಘೋಷಣೆನೇ "ಆಫ್ ಸರ್ಜಿಂಗ್ ಇನ್‌ಫೆಕ್ಷಿಯಸ್ ಡಿಸೀಸ್" ಎಂದು. ಕಾಡು ಕಡಿಮೆಯಾಗುತ್ತಾ ಜನರು ಮತ್ತು ಕಾಡು ಸಮೀಪವಾಗುತ್ತಿದೆ. ಹೆಚ್ಚು ಕಾಡಿನ ಒಳಗಡೆ ಹೋಗುತ್ತಾ, ಹೋಗುತ್ತಾ ಈ ರೀತಿಯ ಕಾಯಿಲೆಗಳು ಹೆಚ್ಚು ಪ್ರಾರಂಭವಾಗಿವೆ. ಸುಮಾರು 30 ವರ್ಷದಲ್ಲಿ 20 ಹೊಸ ಕಾಯಿಲೆಗಳು ಪ್ರಪಂಚಕ್ಕೆ ಬಂದಿವೆ. ಅದಕ್ಕೆ ಬಹಳಷ್ಟು ಕಾಯಿಲೆಗಳಿಗೆ ಔಷಧಿಗಳು ಇಲ್ಲ ಎಂದು ಹೇಳಿದ್ದರಿಂದ, ಕ್ಯಾಸನೂರ್ ಫಾರೆಸ್ಟ್ ಡಿಸೀಸನ್ನು ಕಂಟ್ರೋಲ್ ಮಾಡುವುದಕ್ಕೆ ಅದಕ್ಕೆ ವ್ಯಾಕ್ಸಿನ್ ಕೊಡುವುದಕ್ಕೆ ಪ್ರಪಂಚದಲ್ಲಿ ಶಿವಮೊಗ್ಗ ಕೇಂದ್ರ ಒಂದರಲ್ಲಿ ಈ ವ್ಯಾಕ್ಸಿನ್ ಉತ್ಪಾದನಾ ಘಟಕ ಇರತಕ್ಕಂಥದ್ದು. ಸುಮಾರು 50 ಲಕ್ಷಕ್ಕೂ ಹೆಚ್ಚು ಹಣವನ್ನು ಈ ವ್ಯಾಕ್ಸಿನ್ ಯೂನಿಟ್ ದುರಸ್ತಿ ಮಾಡಿ ಉತ್ಪಾದನೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ನಮ್ಮ ವೈದ್ಯರ ತಂಡ ಅಲ್ಲಿ ಹೋಗಿ ನೋಡಿದೆ. ಮಾನ್ಯ ಸದಸ್ಯರೂ ಕೂಡ ಬಂದಿದ್ದರು. ಕಳೆದ ವಿಧಾನ ಸಭಾ ಅಧಿವೇಶನದಲ್ಲಿ ಹೇಳಿದ್ದೇನೆ, ಮುಚ್ಚಿ ಹೋಗುವುದನ್ನು ಪ್ರಾರಂಭ ಮಾಡುವುದಕ್ಕೆ 1997-98ರಲ್ಲಿ 50 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಲ್ಯಾಬ್ ನಿಂತು ಹೋಗಿದೆ, ಪ್ರೊಡಕ್ಷನ್ ನಿಂತು ಹೋಗಿದೆ. ಅಲ್ಲಿರತಕ್ಕಂತಹ ಸಿಬ್ಬಂದಿ ಮತ್ತು ತಜ್ಞ ವೈದ್ಯರು ನಿರುದ್ಯೋಗಿಗಳಾಗಿದ್ದಾರೆ. ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಕೂಡ ಆ ಕಡೆ ಗಮನ ಹರಿಸುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಎಲ್ಲಾ ಕಡೆ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಕೇಳಿದ್ದು ನಾಗರಹಾವು ಮತ್ತು ಹುಚ್ಚು ನಾಯಿ, ತಮಗೆ ಗೊತ್ತಿರುವ ಹಾಗೆ ಅನೇಕ ಪ್ರಾಣಿಗಳು ಕತೆ ಕಡಿಯುತ್ತದೆ, ಕೋತಿ ಕಡಿಯುತ್ತದೆ, ಮನುಷ್ಯ ಕಡಿಯುತ್ತಾನೆ, ಈ ವ್ಯವಸ್ಥೆಯಲ್ಲಿ ತಾವು ಕುದುರೆ ಕಡಿದದ್ದಕ್ಕೆ, ಕತ್ತೆ ಕಡಿದದ್ದಕ್ಕೆ ಕೋತಿ ಕಡಿದದ್ದಕ್ಕೆ ನೀವು ಏನಾದರೂ ವ್ಯವಸ್ಥೆ ಮಾಡಬೇಕು. ನಾವು ವಾಸ್ತವ್ಯ ಮಾತನಾಡುತ್ತೇವೆ, ಪರಿಣಾಮಕಾರಿಯಾಗಿ ಆಗತಕ್ಕಂಥದ್ದಕ್ಕೆ, ಇದರ ಬಗ್ಗೆ ತಾವು ಏನು ಚಿಂತನೆ ಮಾಡಿದ್ದೀರಿ. ತಮ್ಮ ಸರ್ಕಾರ ಯಾವ ಯಾವ ರೀತಿ ವ್ಯವಸ್ಥೆ ಮಾಡಿದೆ, ಇದನ್ನು ತಪ್ಪಿಸುವುದಕ್ಕೆ ಮತ್ತು ಔಷಧಿ ಕೊಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದೆ ಹೇಳಿ.

ಡಾ|| ಹೆಚ್. ಸಿ. ಮಹದೇವಪ್ಪ : ಹಾವು ಕಡಿದ ಮನುಷ್ಯ ಸಾವನ್ನಪ್ಪುತ್ತಾನೆ. ಹುಚ್ಚು ನಾಯಿ ಕಡಿದರೆ ಸಾವನ್ನಪ್ಪುತ್ತಾರೆ. ಕುದುರೆ, ಕತ್ತೆ, ಎಮ್ಮೆ ಮತ್ತು ಹಂದಿ ಕಡಿದರೆ ಸಾಯುವುದಿಲ್ಲ. ಅದಕ್ಕೆ ಇನ್‌ಫೆಕ್ಷನ್ ಆಗದೆ ಇರುವ ರೀತಿಯಲ್ಲಿ ಟೆಟ್ರಾಕ್ ಹಾಗೂ ಆಂಟಿ ಬಯಾಟಿಕ್ಸ್ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಚಾಮರಾಜ ನಗರದಲ್ಲಿನ ಕೊತ್ತಲವಾಡಿ ಗ್ರಾಮದಲ್ಲಿ ಒಂದು ಹಂದಿ ಕಡಿದು ಒಬ್ಬ ಸತ್ತಿದ್ದಾನೆ.

ಶ್ರೀ ಸಿದ್ದರಾಮಯ್ಯ : ಹಂದಿ ಕಡಿದ ತಕ್ಷಣ ಸಾಯುವುದಿಲ್ಲ, ಗಾಯ ಆದ ತಕ್ಷಣ ಯಾರೂ ಸಾಯುವುದಿಲ್ಲ. ಗಾಯ ಸುಟ್ಟು ಗ್ಯಾಂಗ್ರಿನ್ ಆಗಿ ಎಲ್ಲಾ ಇನ್‌ಫೆಕ್ಷನ್ ಆಗುವುದಕ್ಕೆ ಬಿಟ್ಟರೆ ಯಾರಾದರೂ ಸಾಯುತ್ತಾರೆ. ಆ ತರಹ ಸತ್ತಿರ ಬೇಕೇ ಹೊರತು, ಹಂದಿ ಕಡಿದ ತಕ್ಷಣ ಸತ್ತು ಹೋಗುತ್ತಾರೆಂದು ಇಲ್ಲ. ಹಾವು ಕಡಿದ ತಕ್ಷಣ ಸಾಯುವುದು, ಹುಚ್ಚು ನಾಯಿ ಕಚ್ಚಿದ ತಕ್ಷಣ ಸಾಯುವುದು ಈ ತರಹದ ತೀವ್ರ ಪರಿಣಾಮವಾಗುವುದಿಲ್ಲ. ಆದರೆ ಗಾಯ ಹಾಗೆ ಬಿಟ್ಟು ಔಷಧಿ ತೆಗೆದುಕೊಳ್ಳದೆ ಇದ್ದರೆ ಈ ಪರಿಸ್ಥಿತಿ ಆಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ಸೂಳ್ಯ ತಾಲ್ಲೂಕಿನ ಎಲಿಮೇಲಿ ಪರಿಸರದಲ್ಲಿ ಮತ್ತೆ ಮಂಗನ ಕಾಯಿಲೆ ಉಲ್ಬಣವಾಗಿದೆ. ಮೂರು ದಿವಸಗಳ ಹಿಂದೆ ಆ ವಿಚಾರವನ್ನು ನಮ್ಮ ಜಿಲ್ಲಾ ಆರೋಗ್ಯ ಅಧಿಕಾರಿಗಳ ಗಮನಕ್ಕೆ ತಂದರೆ ಯಾವ ಅಧಿಕಾರಿಗಳೂ ಅಲ್ಲಿಗೆ ಹೋಗಿಲ್ಲವೆಂದು ನಮಗೆ ತಿಳಿದು ಬಂದಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯಾ? ತಕ್ಷಣ ವ್ಯಾಪಕವಾದ ವ್ಯವಸ್ಥೆ ಮಾಡುವಂತಹ ಯೋಜನೆ ಸರ್ಕಾರದಲ್ಲಿ ಇದೆಯಾ?

ಡಾ|| ಹೆಚ್. ಸಿ. ಮಹದೇವಪ್ಪ : ಕಳೆದ ಬಾರಿ ಸದಸ್ಯರು ಹೇಳಿದ ತಕ್ಷಣವೇ ಅಡಿಷನಲ್ ಡೈರೆಕ್ಟರ್ ಆಫ್ ಕಮ್ಯುನಿಕಬಲ್ ಡಿಸೀಸ್ ಇವರನ್ನು ನೇರವಾಗಿ ಸ್ಥಳಕ್ಕೆ ಕಳುಹಿಸಿ ಅಲ್ಲಿ ಬೇಕಾದಂತಹ ಔಷಧೋಪಚಾರಗಳ ಮುಂಜಾಗ್ರತೆ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಟ್ಟು ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ. ಇನ್ನು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಪುನಃ ಕಳುಹಿಸುತ್ತೇನೆ.

ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯಗಳು

148 - ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ 1998-99ರಲ್ಲಿ ವಯಸ್ಕರ ಶಿಕ್ಷಣ ಹಾಗೂ ಸಾರ್ವಜನಿಕ ಗ್ರಂಥಾಲಯಗಳನ್ನು ಜನಪ್ರಿಯಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಹಾಗೂ ಇದಕ್ಕೆ ವಿನಿಯೋಗಿಸಲಿರುವ ಮೊತ್ತವೆಷ್ಟು?*

ಆ) *1995-96, 1996-97, 1997-98 ರಲ್ಲಿ ಇದ್ದ ಗುರಿ ಏನು ಹಾಗೂ ಸಾಧನೆಗಳೇನು? (ವಿವರ ನೀಡುವುದು)*

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) **ವಯಸ್ಕರ ಶಿಕ್ಷಣ**

ಸಂಪೂರ್ಣ ಸಾಕ್ಷರತಾ ಅಂದೋಲನ "ಕನ್ನಡ ನಾಡು ಸಾಕ್ಷರ ನಾಡು" ಅಂದೋಲನ, ಸಾಕ್ಷರೋತ್ತರ ಹಾಗೂ ಮುಂದುವರಿದ ಶಿಕ್ಷಣ ಕಾರ್ಯಕ್ರಮಗಳು. ಇದರಲ್ಲಿ ಕನ್ನಡನಾಡು ಮತ್ತು